doc-535.
T-P-2

Reg No E C 155 25 — 8 — 72

55th Year of Publication : 'Satyavadi' daily, Mysore 4

In State – The First
Golden Jubilee Celebrated Paper
★
News, Views, Dharmic Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು ಧರ್ಮಸ್ಥಾಪನಾನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಧಾರವಾಡದಲ್ಲಿ ಮಹಿಳೆಯರಿಂದ ಮುಷ್ಕರ

ನಾಗರ ಪಂಚಮಿ

ನಾಗರಪಂಚಮಿಯಂದು ಹಾವುಗಳಿಗೆ ಹಾಲೆರೆದು ಹಬ್ಬ ಮಾಡುವುದಾದರೂ ಗದ್ದೆ ಉಳುವುದು, ಭೂಮಿ ತಿಗೆಯುವುದು ಕೂಡದು. ಜನಪದ ಕಲ್ಪನೆಯಂತೆ ಹಿಂದೆ ಮಣಿಪುರ (ಮಾಣಿಕಪುರ) ದಲ್ಲಿದ್ದ ಬ್ರಾಹ್ಮಣ ಶ್ರಾವಣ-ಶುದ್ಧ ಪಂಚಮಿಯಂದು ಉಳುತ್ತಿದ್ದಾಗ, ಒಂದು ಗಂಡು ನಾಗರ ಅವನ ನೇಗಲಿನ ಕೆಳಗೆ ಸಿಕ್ಕಿ ಸತ್ತಿತು: ಆಗ ಅವನ ಕುಲದವರೇ ನಾಶಮಾಡುವೆನೆಂದು ಪಣತೊಟ್ಟ ನಾಗಿಣಿ ಆತನ ಕುಟುಂಬವನ್ನೆಲ್ಲಾ ಕಚ್ಚಿ ಕೊಂದಳು, ಆ ಬ್ರಾಹ್ಮಣನ ಮಗಳೊಬ್ಬಳು ತನ್ನನ್ನು ಪೂಜಿಸಿ, ಹಾಲೆರೆದುಡಕ್ಕಾಗಿ ಅವಳಿಗೆ ಅಮೃತವನ್ನು ಕರುಣಿಸಿ, ಆ ಕುಟುಂಬವನ್ನು ಬದುಕಿಸಿತಂತೆ. ಅಂದಿನಿಂದ ನಾಗರಪಂಚಮಿ ರೂಢಿಗೆ ಬಂದಿತು.

ನಾಗಶಾಪ

ನಾಗಹತ್ಯೆಯು ಮಹಾಪಾಪವೆನ್ನಿತ್ತೇವೆ ನಾವು. ನಾಗಶಾಪವು ಜನ್ಮಜನ್ಮಕ್ಕೂ ನೀಗಸೆನ್ನುತ್ತಾರೆ. ನಾಗ ಉಪದ್ರ ಪರಿಹಾರಕ್ಕಾಗಿ, ನಾಗಮಂಡಲ, ನಾಗಪ್ರತಿಷ್ಠೆ, ಬ್ರಹ್ಮಚಾರಿ ಭೋಜನ, ಕ್ಷೀರಾಭಿಷೇಕ, ಅಶ್ವತ್ಥ ಪ್ರದಕ್ಷಿಣೆ ಮಾಡುತ್ತಾರೆ: ಇಂದಿಗೂ ವಿಶೇಷವಾಗಿ ನಾಗಪೂಜೆ ಪ್ರಚಾರದಲ್ಲಿರುವ ಜಾವ ಮತ್ತು ಬೋರ್ನಿಯೋ ದ್ವೀಪಗಳಲ್ಲಿ ಸತ್ತ ಕ್ಷತ್ರಿಯನ ಜೊಕದೊಂದಿಗೆ ಮೃತ ಹಾವನ್ನು ಸುಡುವ ವಾಡಿಕೆ ಇದೆ. ಗ್ರೀಕ್ ವೀರರ ಚಿತ್ರಗಳಂಗ ಶಕ್ತಿಯ ಪ್ರತೀಕ ನಾಗನ ಚಿತ್ರವಿರುವುದು ಸಾಮಾನ್ಯ

ಭಾರತದಲ್ಲೂ ಹಾವು ಸತ್ತರೆ ಗಂಧ, ಚಂದನ ಕರ್ಪೂರಾದಿಗಳೊಂದಿಗೆ ಸುಡುತ್ತಾರಲ್ಲದೆ ಹಾವಿಗೆ ಅಂತ್ಯಕ್ರಿಯೆ ಮಾಡುತ್ತಾರೆ. (ಕೃ. ಸಂ)

ನಿನ್ನೆಯೂ ಗಲಾಟೆ

ಬೆಂಗಳೂರು– ನಿನ್ನೇ ದಿವಸವೂ ಆಟೋರಿಕ್ಷಾ ಮುಷ್ಕರವಿದ್ದು ಜನತೆಗೆ ಈ ಸಾಮೂಹಿಕ ಮುಷ್ಕರದ ಬಿಸಿ ತಟ್ಟಿತು – ಅಲ್ಲಲ್ಲೇ ಕಲ್ಲು ಎಸೆತಗಳೂ, ನಾಲ್ಕು ಕಡೆ ಲಾಠಿ ಭಾರ್ಜೂ ನಡೆಯಿತು – ಪೋಲೀಸು ಅಸಿಸ್ಟೆಂಟ್ ಕಮಿಷನರ್ ಒಬ್ಬರೂ ಸೇರಿ 12 ಪೋಲೀಸರು ಗಾಯಗೊಂಡರು – 32 ಮಂದಿಯ ದಸ್ತಗಿರಿಯಾಗಿದೆ – ಕಂಟೋನ್ಮೆಂಟು ರೈಲ್ವೇ ಸ್ಟೇಷನ್ ಹತ್ತಿರ ಇಡಲಾಗಿದ್ದ ಪೋಲೀಸು ಸಬ್‌ಇನ್ಸ್‌ಪೆಕ್ಟರರ ಮೋಟಾರು ಸೈಕಲ್ಲಿಗೆ ಬೆಂಕಿ ಇಡಲ್ಪಟ್ಟು ಅದು ಅರ್ಧಂಬರ್ಧ ಡ್ಯಾಮೇಜಾಯಿತು – ಮುಷ್ಕರಗಾರರು ಟ್ಯಾಕ್ಸಿಗಳನ್ನು ಪಿಕೆಟ್ ಮಾಡಿದರು.

★ ದಾವಣಗೆರೆ— ವರ್ತಕ ಸಂಘವು ಬಿಕ್ಕ ಒಪ್ಪಿಸಲು ಸರ್ಕಾರದಲ್ಲಿ 30 ದಿನಗಳ ಅವಧಿ ವಿನಂತಿಸಿದೆ.

ರಾಜ್ಯದ ರಾಜಕೀಯ

ನವದೆಹಲಿ— ದೇವರಾಜ ಅರಸ್ ರವರ ಮಂತ್ರಿಮಂಡಲದ ಉಚ್ಚಾಟನೆ ಮಾಡುವದಾಗಿ ಘೋಷಿಸಿರುವ ಮಾಜಿ ರೈಲ್ವೇ ಮಂತ್ರೀ ಹನುಮಂತಯ್ಯನವರ ಚಟುವಟಿಕೆ ಬಗ್ಗೆ ತೀವ್ರ ಗಮನ ಕೊಟ್ಟಿರುವ ಕಾಂಗ್ರೆಸ್ ಹೈ ಕಮ್ಯಾಂಡ್ ಶ್ರೀ ಹನುಮಂತಯ್ಯನವರ ಪಾತ್ರ ವಿಷಯದಲ್ಲಿ ಪ್ರದೇಶ ಕಾಂಗ್ರೆಸ್ಸಿನಿಂದ ವರದಿ ಕೇಳಿದ್ದು ಅದು ಬಂದನಂತರ ಮುಂದಿನ ಕ್ರಮ ಕೈಕೊಳ್ಳಲಾಗುವದೆಂದು ಹೇಳಲಾಗಿದೆ.

★

ಪ್ರಕಟಣೆ

ಮೈಸೂರು— ಈ ಮಾಹೆಯ ಸಾಧಾರಣ ಪುರಸಭಾಧಿವೇಶನವು ತಾ॥ 31 ಗುರುವಾರ ಮಧ್ಯಾಹ್ನಾ ೪ರ 4 ಗಂಟೆಗೆ ನಡೆಯುವುತಾಗಿದೆ.

ಶಂಕಿತ ಪ್ರಾಜೆಕ್ಟ್

ಬೆಂಗಳೂರು— ಶಂಕಿತ ಪ್ರಾಜೆಕ್ಟ್ ನಲ್ಲಿ ನಿಷ್ಣಾತರಾದ ಡ್ಯಾಮೇಜ್ ಆಗಿರುವುದೆಂದು ಲೋಕೋಪಯೋಗಿ ಕಾರ್ಯಗಳ ಮಂತ್ರಿ ಶ್ರೀ ಚೆನ್ನಬಸಪ್ಪನವರು ಪತ್ರಿಕೆಯವರಿಗೆ ತಿಳಿಸಿದರು – ಈ ಬಗ್ಗೆ ಸರಕಾರವು ಸೂಕ್ತ ಕಾಲದಲ್ಲಿ ತನಿಖೆ ವಿಷಯ ನಿರ್ಧರಿಸುವುದೆಂದು ಹೇಳಿದರು

★

ಮಳೆ ಅನಾಹುತ

ನ್ಯೂಯಾರ್ಕ್— ದಕ್ಷಿಣ ಕೊರಿಯಾದ ಹಲವು ಜಿಲ್ಲೆಗಳಲ್ಲಿ ವಿಪರೀತ ಮಳೆಯಿಂದ 400 ಮಂದಿ ಸತ್ತು 300000 ಮಂದಿ ಮನೆಮಠವಿಲ್ಲದವರಾಗಿರುವರು ಎಂದು ಸೆಯೋಲಿನಿಂದ ವರದಿಯಾಗಿದೆ.

★

ಸುಪ್ರೀಂಕೋರ್ಟಿನಲ್ಲಿ ರಾಜರ ಅರ್ಜಿ

ನವದೆಹಲಿ— ತಮ್ಮ ಮನ್ನಣೆ, ರಾಜಧನ, ಇತರ ರಿಯಾಯಿತಿಗಳನ್ನು ರದ್ದು ಪಡಿಸುವ ರಾಜ್ಯಾಂಗದ 26 ನೇ ತಿದ್ದುಪಡಿಯ ನ್ಯಾಯಸಮ್ಮತಿ ಪ್ರಶ್ನಿಸಿ, ಮಾಜಿ ಮಾಜಿ ರಾಜರು ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಹಾಕಿರುವರು.

●

ಮಹಿಳೆಯರ ಉಪವಾಸ ಸತ್ಯಾಗ್ರಹ

ಧಾರವಾಡ— ವನಿತಾ ಸೇವಾ ಸಮಾಜದಲ್ಲಿನ ದುರಾಡಳಿತವನ್ನು ಪ್ರತಿಭಟಿಸಿ, ಸಮಾಜದ 5 ಮಂದಿ ಸದಸ್ಯರು ಸರದಿಯ ಮೇಲೆ ಸುಭಾಷ್ ರಸ್ತೆಯ ಬಸ್ ಸ್ಟಾಪಿಂಗ್ ಹತ್ತಿರ ಉಪವಾಸ ಪ್ರಾರಂಭಿಸಿರುವರು – 44 ವರ್ಷದ ಈ ಸಮಾಜದ ಆಡಳಿತ ಸಮಿತಿಗೆ ಭಾರತ ಪ್ರವಾಸ ಸಚಿವೆ ಡಾ॥ ಸರೋಜಿನಿ ಮಹಿಷಿಯವರು.

★ ಢಾಕಾ— ಬಂಗ್ಲಾದೇಶವು ಕ್ಷಿಪ್ರದಲ್ಲೇ ಭಾರತದಿಂದ 2800 ರೈಲ್ವೇ ವ್ಯಾಗನ್‌ಗಳನ್ನು ಆಮದು ಮಾಡಿಕೊಳ್ಳಲಿದೆ.

ಹಸುವಿನಿಂದ ಸಾವು

ಪಾಟ್ನಾ— ಬಿಹಾರಿನಾದ್ಯಂತ ಕಳೆದ ಎರಡು ತಿಂಗಳಲ್ಲಿ ಹಸುವಿನಿಂದ 250 ಮಂದಿ ಸತ್ತಿರುವರೆಂದು ಶಾಸನಸಭೆಯ ವಿರೋಧ ನಾಯಕ ಶ್ರೀ ಭಾಂಕೂರ್ ಪತ್ರಿಕೆಯವರಿಗೆ ತಿಳಿಸಿದರು.

★

ಬಾಜಿ ಕಟ್ಟಿ ಅಂಗಡಿಗಳಿಲ್ಲ

ಮದರಾಸು— ಅಕ್ಟೋಬರು 29 ರಂದು ಪ್ರಾರಂಭವಾಗಿ 40 ದಿನಗಳು ನಡೆಯುವ ಕುದುರೆ ಜೂಜಿನಲ್ಲಿ ಬಾಜಿ ಕಟ್ಟುವ ಅಂಗಡಿಗಳಿರುವದಿಲ್ಲ : ಟೋಟ್‌ಗಳು ಮಾತ್ರ ಇರುತ್ತವೆ.

○

ಸಂಸ್ಕೃತಕ್ಕೆ ಮನ್ನಣೆ

ಪಾಟ್ನಾ— ಬಿಹಾರಿನಲ್ಲಿ ಮುಂದಿನ ವಿದ್ಯಾಭ್ಯಾಸ ವರ್ಷದಿಂದ ಹೈಸ್ಕೂಲು ವಿದ್ಯಾರ್ಥಿಗಳಿಗೆ ಸಂಸ್ಕೃತವು ಖಡ್ಡಾಯ ಪಾಠಶಾಸ್ತ್ರವಾಗಿ ಮಾಡಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕೇದಾರ್ ಪಾಂಡೆ ಹೇಳಿರುವರು.

○

ಬ್ಲಾಕ್ ಅಧಿಕಾರಿಗಳ ಪೂರ್ಣ ಸಸ್ಪೆಂಡ್

ಪಾಟ್ನಾ— ಚಪ್ರಾ ಜಿಲ್ಲೆಯ ರಿವಿಲ್ಗಂಜ್ ಬ್ಲಾಕ್ ಕಛೇರಿಗೆ ಕಂದಾಯ ಮಂತ್ರಿ ಶ್ರೀ ಚಂದ್ರಶೇಖರ ಸಿಂಗ್ ಸಿನ್ನ ಭೇಟಿ ಅನಿರೀಕ್ಷಿತವಾಗಿ ಭೇಟಿ ಕೊಟ್ಟಾಗ, ಅಲ್ಲಿನ ಆಫೀಸರೂ ಸೇರಿ ಯಾವ ನೌಕರರೂ 11 ಗಂಟೆಯಾದರೂ ಹಾಜರಾಗದಿದ್ದುದನ್ನು ಕಂಡು, ಅಲ್ಲಿಯ ಎಲ್ಲ ಅಧಿಕಾರಿಗಳು ನೌಕರರನ್ನು ಸಸ್ಪೆಂಡು ಮಾಡಿದರು.

● ಶ್ರೀನಗರ— ಅಮರನಾಥಗುಹೆಯಲ್ಲಿ ನಿನ್ನೆ ಬೆಳಿಗ್ಗೆ 3500 ಯಾತ್ರಿಕರು ಪವಿತ್ರ ಶಿವಲಿಂಗದ ದರ್ಶನ ಪಡೆದರು.

ವೃತಾಂತ ಸಂಗ್ರಹ

ಮಾಸ್ಕೊ— ಮರಗಳು ರಾತ್ರಿ ಹೊತ್ತಿನಲ್ಲಿ 1 ರಿಂದ 5 ಗಂಟೆಗಳ ಕಾಲ ನಿದ್ರಿಸುತ್ತವೆಂದು ರಷ್ಯಾ ಸಂಶೋಧಕ ವ್ಲಾಡಿಮಿರ್ ಹೇಳಿರುವರು.

ನವದೆಹಲಿ— ಏ ಐ ಆರ್ ನಲ್ಲಿ ಪ್ರಸರಿಸುವ ಸಂಭಾಷಣೆಗಳಿಗೆ ಗೀತಾ ವಿದ್ವಾಂಸರೆಂದು ವಿವರಿಸಲ್ಪಟ್ಟಿರುವ ಸ್ವಾಮಿ ಚಿನ್ಮಯಾನಂದರಿಗೆ ಡೊರೆತಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಭುವನೇಶ್ವರ— ರೂರ್ಕೆಲಾ ಕಬ್ಬಿಣ ಯಂತ್ರಾಗಾರದ ಮುಷ್ಕರಿಸಿರುವ ಕಾರ್ಮಿಕರೂ ಸೇರಿದ ಗುಂಪಿಗೂ ಪೋಲೀಸರಿಗೂ ಆದ ಘರ್ಷಣೆಯಲ್ಲಿ ಒಬ್ಬ ಸತ್ತು 76 ಮಂದಿ ಗಾಯಗೊಂಡರೆಂದೂ, ಈ ಬಗ್ಗೆ ಸರಕಾರ ತೀವ್ರ ಗಮನ ಕೊಟ್ಟಿದೆಯೆಂದೂ ಶಾಸನಸಭೆಯಲ್ಲಿ ತಿಳಿಸಲಾಯಿತು.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ 25 8 72 ರಿಂದ ಅನೋಷ ಪ್ರಾರಂಭ

ರಾಜೇಂದ್ರ ಕುಮಾರ್ ಆರ್ಪಿಸುವ

ಟಾಂಗೇವಾಲಾ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ — ರಾಜೇಂದ್ರ ಕುಮಾರ್ ಮುಮ್ತಾಜ್ ಐ. ಎಸ್. ಜೋಹರ್

ಸಂಗೀತ— ನೌಷದ್ ನಿರ್ದೇಶನ — ನರೇಶ್ ಕುಮಾರ್

ಬೆಳಗಿನ ಪ್ರದರ್ಶನ 10-30 ಕ್ಕೆ ಗುರು ದಕ್ಷಿಣೆ

ಅಪೆರಾ 2 ನೇ ವಾರ

— ಅತ್ಯನೋಷ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ — ರಾಜ್ ಕುಮಾರ್, ಹೇಮಾಮಾಲಿನಿ, ರಾಖಿ, ವಿನೋದ್ ಮೆಹ್ರಾ

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore

"ವಾನನನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈದೀಶ ಹೊತ್ತ ಚಿತ್ರ ಸಂದೇಶ ರವರ ಜೊಚ್ಚಲು ಚಿತ್ರ

★

ಆನೆ - ಹುಡುಗ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ



Potect the Cow

Help The Gorakshana

— Humanitarian Propoganda Monthly ....

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore